ಅಧ್ಯಕ್ಷರು :- ಮಾನ್ಯ ಸಚಿವರು ಕೊಡಬಹುದು ಎಂದು ಹೇಳುತ್ತಿದ್ದಾರೆ.

ಶ್ರೀ ಖಾದ್ರಿ ಸೈಯದ್ ಅಜಿಮ್‌ಪುರ್ :- ಶಾಸಕರ ಅನುದಾನದಲ್ಲಿ ಸಮುದಾಯ ಭವನಕ್ಕೆ ಸರ್ಕಾರಿ ಜಾಗದಲ್ಲಿ ಕೊಡಬೇಕೆಂಬ ಬಗ್ಗೆ ಗೈಡ್‌ಲೈನ್ಸ್ ಇದೆ. ಆದರೆ ಇದು ಶಾದಿಮಹಲ್ ಬಗ್ಗೆ ..... ಸರ್ಕಾರದವರು

ಅಧ್ಯಕ್ಷರು :- ಗೈಡ್‌ಲೈನ್ಸ್‌ನಲ್ಲಿ ಅದನ್ನು ಸೇರಿಸುವುದಕ್ಕೆ ಏರ್ಪಾಡು ಮಾಡುತ್ತಾರೆ. ನಾನು ಮಂತ್ರಿಗಳಿಗೆ ಮಾತನಾಡಲು ಅನುಮತಿ ಕೊಟ್ಟಿದ್ದೇನೆ, ಬೇರೆಯವರು ಮಾತನಾಡಿದ್ದನ್ನು ದಾಖಲು ಮಾಡಬೇಡಿ.

ಶ್ರೀ ಖಾದ್ರಿ ಸೈಯದ್ ಅಜಿಮ್‌ಪುರ್ :- ಶಾದಿಮಹಲ್ ಅನ್ನು ಅಂಜೂಮಾನ ಸಂಸ್ಥೆಯ ಜಾಗದಲ್ಲಿ ಕಟ್ಟಬೇಕೆಂಬ ಬಗ್ಗೆ ಒಂದು ಗೈಡ್‌ಲೈನ್ಸ್ ಇದೆ. ಆದರೆ ಶಾಸಕರ ಅನುದಾನವು ಸರ್ಕಾರಿ ಜಾಗದಲ್ಲಿ ಕಟ್ಟಬೇಕೆಂದು ಇದೆ, ಅದಕ್ಕಾಗಿ ಶಾಸಕರ ಅನುದಾನದಲ್ಲಿ ಶಾದಿಮಹಲ್‌ಕ್ಕೆ ಕೊಡುವುದಕ್ಕೆ ಬರುವುದಿಲ್ಲವೆಂದು ಜಿಲ್ಲಾಧಿಕಾರಿಗಳು ರಿಜೆಕ್ಟ್ ಮಾಡುತ್ತಿದ್ದಾರೆ. ಶಾದಿಮಹಲ್‌ಗೆ ಶಾಸಕರ ಅನುದಾನದಲ್ಲಿ ಕೊಡಬೇಕು.

ಅಧ್ಯಕ್ಷರು :- ಖಾಸಗಿ ಜಾಗಕ್ಕೆ ಹೇಗೆ ಕೊಡುವುದಕ್ಕಾಗುತ್ತದೆ ನೀವೇ ಹೇಳಿ? ಪ್ರೈವೇಟ್ ಜಾಗಕ್ಕೆ ಸರ್ಕಾರದವರು ಹಣವನ್ನು ಕೊಡುವುದಕ್ಕೆ ಆಗುತ್ತದೆಯೇ? ಅದನ್ನು ಸರ್ಕಾರಿ ಜಾಗದಲ್ಲಿ ಕಟ್ಟಿ. ಸರ್ಕಾರಿ ಜಾಗದಲ್ಲಿ ಕಟ್ಟುವುದಿದ್ದರೆ ಕೊಡಿ. ಅದಕ್ಕೆ ಸಫಿಷಿಯೆಂಟ್ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ, ದಯವಿಟ್ಟು ಕ್ಷಮಿಸಿ. ಮಿಕ್ಕ ವಿಷಯಗಳನ್ನು ಮಾನ್ಯ ಮಂತ್ರಿಗಳ ಛೇಂಬರಿಗೆ ಹೋಗಿ ಮಾತನಾಡಿ.

ಶ್ರೀ ಎಂ.ಎಲ್. ಉಸ್ತಾದ್ :- ಸಮುದಾಯ ಭವನಕ್ಕೆ ಎಂ.ಪಿ. ಫಂಡ್‌ನಿಂದ ಕೊಡಬಹುದು.

ಅಥಣಿ ತಾಲ್ಲೂಕಿನ ಮುರಗುಡಿಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡ

115 (806) ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ) ಮಾನ್ಯ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಮುರಗುಂಡಿ ಗ್ರಾಮದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡ ನಿರ್ಮಾಣ ಕಾರ್ಯವನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ;

ಆ) ಕಟ್ಟಡ ನಿರ್ಮಾಣ ಕಾರ್ಯದ ಅಂದಾಜು ವೆಚ್ಚ, ಕಾರ್ಯ ಪ್ರಾರಂಭಿಸಿದ ದಿನಾಂಕ, ಕಾರ್ಯ ಪೂರ್ಣಗೊಳಿಸಿದ ದಿನಾಂಕ, ಕುರಿತು ಸಂಪೂರ್ಣ ವಿವರಣೆ ನೀಡುವುದು;

ಇ) ಕಟ್ಟಡ ಕಾರ್ಯ ಕಳಪೆ ಮಟ್ಟದಲ್ಲಿ ನಡೆಯುತ್ತಿರುವುದು ಹಾಗೂ ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ, ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತಕ್ಕೆ ವಹಿಸಲಾಗಿದೆ.

ಆ) ಅಂದಾಜು ವೆಚ್ಚ ರೂ. 185.37 ಲಕ್ಷಗಳು. ದಿನಾಂಕ 1/3/2001 ರಿಂದ ಪ್ರಾರಂಭಿಸಲಾಗಿದ್ದು ಕೆಲಸ ಪ್ರಗತಿಯಲ್ಲಿದೆ.

ಇ) ಕಟ್ಟಡ ಕಾಮಗಾರಿ ಕಳಪೆ ಮಟ್ಟದಲ್ಲಿ ನಡೆಯುತ್ತಿಲ್ಲ. ಕಟ್ಟಡ ಕಾಮಗಾರಿ ಮಂದಗತಿಯಲ್ಲಿ ನಡೆಯುತ್ತಿರುವುದಕ್ಕೆ ನೀರಿನ ಸೌಲಭ್ಯ ಇಲ್ಲದೇ ಇರುವುದು ಮುಖ್ಯ ಕಾರಣ. ಈಗಾಗಲೇ ಕೊಳವೆ ಬಾವಿಗಳನ್ನು ಕೊರೆದಿದ್ದು, ಅದು ಬತ್ತಿ ಹೋಗಿದೆ. ನಿವೇಶನದಲ್ಲಿ ಕೊಳವೆ ಬಾವಿ ಕೊರೆಯಲು ಅವಕಾಶವಿಲ್ಲ. ಆದುದರಿಂದ ನೀರು ದೊರೆಯುವ ಸ್ಥಳವನ್ನು ಗುರುತಿಸಿ ದೂರದಲ್ಲಿ ಕೊಳವೆ ಬಾವಿಯನ್ನು ಕೊರೆದು ಅಲ್ಲಿಂದ ಪೈಪ್ ಲೈನ್ ಮುಖಾಂತರ ನೀರನ್ನು ತರುವ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಡೊಂಗರಗಾಂವ್ ಶಹಜಹಾನ್ ಇಸ್ಮಾಯಿಲ್ :- ಮಾನ್ಯ ಅಧ್ಯಕ್ಷರೆ, ಈ ಮುರಗುಂಡಿ ಗ್ರಾಮದಲ್ಲಿ ಮೊರಾರ್ಜಿ ದೇಸಾಯಿ ಶಾಲೆಯ ಕಟ್ಟಡದ ನಿರ್ಮಾಣ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮಕ್ಕೆ ವಹಿಸಲಾಗಿದೆ ಎಂದು ಹೇಳಿದ್ದಾರೆ. ನನ್ನ ಎರಡನೇ ಪ್ರಶ್ನೆಗೆ ಸರಿಯಾದ ಉತ್ತರವು ಸಿಕ್ಕಿರುವುದಿಲ್ಲ. ಕಟ್ಟಡ ನಿರ್ಮಾಣದ ಕಾರ್ಯ ಪ್ರಾರಂಭ ಮಾಡಿರುವ ಬಗ್ಗೆ ಮಾತ್ರ ಹೇಳಿದ್ದಾರೆ. ದಯಮಾಡಿ ಸಚಿವರು ಈ ಕೆಲಸ ಯಾವ ಹಂತದಲ್ಲಿದೆ ಹಾಗೂ ಅದನ್ನು ಪೂರ್ಣಗೊಳಿಸುವ ದಿನಾಂಕವನ್ನು ನಿಗದಿಪಡಿಸಿದ್ದಾರೆ ಎನ್ನುವ ಬಗ್ಗೆ ಹೇಳಬೇಕೆಂದು ನಾನು ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ :- ಮಾನ್ಯ ಅಧ್ಯಕ್ಷರೆ, ಒಟ್ಟಾರೆ ಪರಿಸ್ಥಿತಿ ಈ ರೀತಿ ಇದೆ, ನ್ಯಾಷನಲ್ ಪ್ರಾಜೆಕ್ಟ್ ಕನ್‌ಸ್ಟ್ರಕ್ಷನ್ಸ್ ಕಂಪನಿದ್ದು 16 ಇದೆ, ಹಾಗೆಯೇ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದು 5 ಇದೆ, ಇದು ಒಂದೊಂದು ಹಂತದಲ್ಲಿ ಈ ರೀತಿಯಾಗಿದೆ. 2002 ರಲ್ಲಿ 20 ವಸತಿ ಶಾಲೆಗಳು ನಮ್ಮ ವಶಕ್ಕೆ ಬರಲಿವೆ. 8 ಕಾಮಗಾರಿಗಳು ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಮುಗಿಸುತ್ತಿದ್ದೇವೆ. ಎರಡು ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಉಳಿದ 16 ಕಟ್ಟಡ ಕಾಮಗಾರಿಗಳು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳ್ಳಲಿವೆ. ಈ ಕಾಮಗಾರಿಗಳು ಮುಕ್ತಾಯಗೊಂಡು ಮಕ್ಕಳಿಗೆ ಮೂಲಭೂತ ಸೌಕರ್ಯಗಳು ದೊರೆಯಲಿವೆ. ಇದು ಒಂದು ಸ್ಟೇಜ್, ಎರಡನೇ ಸ್ಟೇಜು 2002-03ನೇ ಸಾಲಿಗೆ ಕಾಮಗಾರಿಗಳಿಗೆ ಟೆಂಡರನ್ನು ಕರೆದು 18 ಕಾಮಗಾರಿಗಳಿಗೆ ಕಾರ್ಯಜ್ಞೆ ನೀಡಲಾಗಿದೆ. ಇದಲ್ಲದೆ 6 ಶಾಲೆಗಳಿಗೆ ನಿವೇಶನವು ದೊರೆತಿದ್ದು ಇದಕ್ಕೆ ಈಗಾಗಲೇ ಟೆಂಡರನ್ನು ಕರೆಯಲಾಗಿದೆ. ಇದು ಸೆಪ್ಟೆಂಬರ್ 2ರೊಳಗೆ ಆಗುತ್ತದೆಂದು ಹೇಳಿದ್ದೇವೆ. ಹೀಗೆ ಎಲ್ಲವೂ ಪ್ರೋಗ್ರೆಸ್‌ನಲ್ಲಿವೆ, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನವರು ಅವರನ್ನು ಕರೆದು ನೇರವಾಗಿ ಮಾತುಕತೆಯಾಡಿ ಬೇಗನೆ ಮುಗಿಸಿಕೊಡಬೇಕೆಂಬ ಬಗ್ಗೆ ಈಗಾಗಲೇ ಆದೇಶವು ಹೋಗಿದೆ.

ಶ್ರೀ ಡೊಂಗರಗಾಂವ್ ಶಹಜಹಾನ್ ಇಸ್ಮಾಯಿಲ್ :- ಈ ಮೊರಾರ್ಜಿದೇಸಾಯಿ ಕಟ್ಟಡದ ಕಾಮಗಾರಿ 1-3-2001ರಂದು ಪ್ರಾರಂಭವಾಗಿದೆ. ನಾನು ಕಳೆದ ಏಪ್ರಿಲ್ ತಿಂಗಳಲ್ಲಿ

ಅಲ್ಲಿಗೆ ಭೇಟಿಯನ್ನು ಕೊಟ್ಟಿದ್ದೆ. ಮೊರಾರ್ಜಿ ದೇಸಾಯಿ ಶಾಲೆ ಮತ್ತು ವಸತಿ ಶಾಲೆಯಲ್ಲಿರುವಂತಹವರಿಗೆ ಮಕ್ಕಳಿಗೆ ವ್ಯವಸ್ಥೆಯ ಸಲುವಾಗಿ, ಆ ಕಟ್ಟಡದ ನಿರ್ಮಾಣ ಕಾರ್ಯವನ್ನು ನಾವು ನೋಡಿದರೆ ಏಪ್ರಿಲ್‌ನಲ್ಲಿ ಸುಮಾರು 13 ತಿಂಗಳ ನಂತರ ಇನ್ನು ಅದು ರೂಫ್ ಲೆವಲ್‌ಗೆ ಬಂದಿರುವುದು ಆಗಿರಲಿಲ್ಲ. ಅಲ್ಲಿ ಯಾರು ಜವಾಬ್ದಾರಿಯುತ ಈ ಪಂಪು ಏಜೆನ್ಸಿಯವರು ಯಾರೂ ಇರಲಿಲ್ಲ. ಅಲ್ಲಿ ಮಣ್ಣು ಮಿಶ್ರಿತವಾಗಿತ್ತು, ಕ್ಯೂರಿಂಗ್ ಕೆಲಸ ಸರಿಯಾಗಿರಲಿಲ್ಲ, ಅದಕ್ಕಾಗಿ ನಾನು ಆತಂಕಗೊಂಡು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನಾನು ಮಾನ್ಯ ಸಚಿವರಿಗೆ ತಮ್ಮ ಮೂಲಕ ವಿನಂತಿ ಏನೆಂದರೆ, ಸಮಾಜಕಲ್ಯಾಣ ಇಲಾಖೆಯಿಂದ ಸುಮಾರು 185 ಲಕ್ಷ ರೂಪಾಯಿಗಳನ್ನು ನಾವು ವೆಚ್ಚ ಮಾಡುವಾಗ ಈ ದಲಿತರು ಮತ್ತು ಬಡವರ ಮಕ್ಕಳಿಗೆ ವಸತಿ ಸೌಕರ್ಯವನ್ನು ಕಲ್ಪಿಸುವಂತಹ ಇಂತಹ ಮಹತ್ವವಾದ ಕಾಮಗಾರಿ ಇದು ವ್ಯವಸ್ಥಿತವಾಗಿ ಆಗಬೇಕು. ಇದು ನಿಗದಿತ ವೇಳೆಯೊಳಗಾದರೆ ಸರ್ಕಾರಕ್ಕೆ ಹೆಚ್ಚು ಭಾರವಾಗುವುದಿಲ್ಲ ಮತ್ತೆ ಆದಷ್ಟು ಬೇಗನೆ ಆ ಸೌಕರ್ಯವನ್ನು ಪಡೆಯುವಂತವರಾಗಬೇಕೆಂಬುದು ನನ್ನ ಉದ್ದೇಶ. ಇವರು ಕಳಪೆ ಕಾಮಗಾರಿ ಇಲ್ಲವೆಂದು ಹೇಳಿದ್ದಾರೆ. ಅದರ ಸೂಪರ್‌ವೈಜರ್ ಸರಿಯಾಗಿ ಆ ಸಂಸ್ಥೆಯವರು ಮಾಡುತ್ತಿಲ್ಲ. ಇದಕ್ಕೆ ಸಮಾಜಕಲ್ಯಾಣ ಇಲಾಖೆಯವರು ಇದರ ಬಗ್ಗೆ ಹೆಚ್ಚು ಗಮನಹರಿಸಿ ಈ ಎಲ್ಲಾ ಯೋಜನೆಗಳನ್ನು ವ್ಯವಸ್ಥಿತವಾಗಿ ಮುಗಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :- ತಾವು ಸಪ್ಲಿಮೆಂಟರಿಯನ್ನು ಕೇಳದೆ ಕಳಪೆ ಕಾಮಗಾರಿಗಳ ಬಗ್ಗೆ ಕೇಳುತ್ತಿದ್ದೀರಿ. ತಾವು ಸಪ್ಲಿಮೆಂಟರಿಯನ್ನು ಕೇಳಿ.

ಶ್ರೀ ಎ. ಕೃಷ್ಣಪ್ಪ :- ಮಾನ್ಯ ಅಧ್ಯಕ್ಷರೇ, ಅವರ ಆತಂಕಕ್ಕೆ ಉತ್ತರವನ್ನು ಕೊಡುತ್ತಿದ್ದೇವೆ. ನಿಮಗೆ ಇದರ ಬಗ್ಗೆ ಆತಂಕ ಬೇಡ, ಡಿಸೆಂಬರ್ ಕೊನೆಯೊಳಗಾಗಿ ಅದನ್ನು ಮುಕ್ತಾಯಮಾಡಿ ಮಕ್ಕಳಿಗೆ ಹ್ಯಾಂಡ್‌ಓವರ್ ಮಾಡುತ್ತೇವೆ.

ಕೊರಗ ಜನಾಂಗದವರ ಅಭಿವೃದ್ಧಿ

116 (100) ಶ್ರೀ ಗೋಪಾಲಬಂಡಾರಿ. ಹೆಚ್ (ಕಾರ್ಕಳ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗಿರಿಜನ ಉಪಯೋಜನೆಯಲ್ಲಿ ಕೊರಗ ಜನಾಂಗದವರ ಅಭಿವೃದ್ಧಿಗೆ ನಿರ್ದಿಷ್ಟ ಯೋಜನೆಯನ್ನು ರೂಪಿಸಲಾಗಿದೆಯೇ;

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕುಡುಬಿ ಜನಾಂಗದವರು ಗುಡ್ಡಗಾಡು ಪ್ರದೇಶದಲ್ಲಿದ್ದು ತೀರಾ ಹಿಂದುಳಿದವರಾದುದರಿಂದ ಅವರನ್ನು ಗಿರಿಜನ ಗುಂಪಿಗೆ ಸೇರಿಸಲು ಏನಾದರೂ ಪ್ರಯತ್ನ ನಡೆದಿದೆಯೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.